ನಿನ್ನ ಕೋಟೆ ಬಂಗ್ಲೆ, ಕಾಲೇಜು, ಕೆರೆದಂಡೆ ಯಾವುದೂ ಏಕಾಂತವನ್ನು ಕೊಡೋದಿಲ್ಲ ಅಲ್ವಾ, ಅದ್ಕೆ ಸುಮ್ನೆ ಕಿಡ್ನ್ಯಾಪಿನ ನಾಟಕ ಮಾಡಿಸ್ದೆ, ಆ ಇಬ್ರೂ ನನ್ನ ಅಸಿಸ್ಟೆಂಟ್ಸೇ....' ಎಂದವನು ಕೋಮಲವಾಗಿ ಹೊಂಬಣ್ಣದಿಂದ ಹೊಳೆಯುತ್ತಿದ್ದ ಅವಳ ಹಸ್ತವನ್ನು ಅದುಮಿದ.

ಅವಳೂ ತಲೆ ಎತ್ತಿ ಅವನತ್ತ ನೋಡಿದಳು. ಮತ್ತೆ ಆ ಜೋಡಿ ಕಣ್ಣುಗಳು ಮಿಲನವಾದವು. ಋಣಾನುಬಂಧವೋ ಎನ್ನುವಂತೆ ಮತ್ತೆ 13 ವರ್ಷಗಳ ನಂತರ ಒಬ್ಬರನ್ನೊಬ್ಬರು ಸಂಧಿಸಿದ್ದರು. ಇಷ್ಟು ವರ್ಷಗಳ ಕಾಲ ಒಬ್ಬರಿಗೊಬ್ಬರು ಜಾತಕಪಕ್ಷಿಗಳಂತೆ ಕಾದಿದ್ದರು.

ಹೂವಿನಂತಹ ಹುಡುಗಿ ಋತುವನ್ನು ಇನ್ನು ಬಿಟ್ಟಿರಲಾರೆನೆನ್ನುವಂತೆ ಅವಳನ್ನು ಗಾಢವಾಗಿ ಅಪ್ಪಿಕೊಂಡ ಹೇಮಂತ. ಅವಳೂ ಲತೆಯಂತೆ ಅವನನ್ನು ಬಳಸಿದಳು. ಅದೆಷ್ಟೋ ಹೊತ್ತು ಅವರಿಬ್ಬರೂ ಅದೇ ಸ್ಥಿತಿಯಲ್ಲಿದ್ದರು. ಅಷ್ಟರಲ್ಲಿ ಯಾರೋ ಮೆಟ್ಟಿಲೇರಿ ಬರುವ ಸದ್ದಾಯಿತು.

8

ಹಾಗೆ ಮೆಟ್ಟಿಲೇರಿ ಬಂದವಳು ರಮ್ಯಳಾಗಿದ್ದಳು. ಒಬ್ಬರ ತೋಳ್ತೆಕ್ಕೆಯಲ್ಲಿ ಒಬ್ಬರು ಕರಗಿಹೋಗಿ ಪ್ರಪಂಚವನ್ನೇ ಮರೆತಿರುವ ಆ ಪ್ರೇಮಿಗಳನ್ನು ರಮ್ಯ ತನ್ಮಯಳಾಗಿ ನೋಡಿದಳು. ಅವರಿಬ್ಬರ ನಡುವಿನ ಪ್ರೇಮದ ಗಾಢತೆ ಅವಳಲ್ಲಿ ಅಚ್ಚರಿ ಹುಟ್ಟಿಸಿತ್ತು. ಋತು ಹೇಮಂತನ ಬಗ್ಗೆ ಚಿಕ್ಕಂದಿನ ಪ್ರೇಮವನ್ನು ಹೇಳಿದಾಗ, ಕುಮಾರನೇ ತನ್ನ ಹೇಮಂತನೆಂದಾಗ ನಿಜವಾಗಿ ಅವಳು ಭ್ರಮೆಗೆ ಬಿದ್ದಿರಬಹುದೆಂದೇ ಅಂದುಕೊಂಡಿದ್ದಳು ರಮ್ಯ. ಆದರೆ ಋತು ಮಹಡಿಯೇರಿ ಹೋದ ಮೇಲೆ ಕುಮಾರನ ತಾಯಿ ಅವನೇ ಹೇಮಂತನೆಂದು ಹೇಳಿದಾಗ ಅವಳಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಹೀಗೂ ನಡೆಯಬಹುದೇ? ಋತು–ಹೇಮಂತರ ಪರಸ್ಪರ ಪ್ರೀತಿ ಅವರನ್ನು ಒಂದುಗೂಡಿಸಿರಬಹುದೇ? ಎಲ್ಲೋ ಹುಟ್ಟಿದ ನದಿ ಹುಡುಕಿಕೊಂಡು ಹೋಗಿ ಸಮುದ್ರವನ್ನೇ ಸೇರುತ್ತದೆ. ಮಾವಿನಮರದ ಚಿಗುರೆಲೆಯ ರಸವನ್ನು ಕುಡಿದ ಕೋಗಿಲೆ ಚೈತ್ರಮಾಸದಲ್ಲಿಯೇ ಇಂಪಾಗಿ ಉಲಿಯುತ್ತದೆ. ಹಾಗೆಯೇ ನಿಜವಾದ ಪ್ರೀತಿ ಹೀಗೆ ಮಧುರಮಿಲನದಲ್ಲಿ ವ್ಯಕ್ತಗೊಳ್ಳುತ್ತದೆಯೇ?....ಅವಳಲ್ಲಿ ಉತ್ತರವಿರಲಿಲ್ಲ. ಋತುಹೇಮಂತರ ಪ್ರೀತಿ ಹೀಗೆಯೇ ಮಧುರವಾಗಿರಲಿ. ಮುಂದೆ ಅವರಿಬ್ಬರ ದಾಂಪತ್ಯಜೀವನ ಸವಿಯಾಗಿರಲಿ....ಅವಳ ಮನಸ್ಸು ತನಗರಿವಿಲ್ಲದಂತೆ ಹಾರೈಸಿತು.

ಹಾಗೆಯೇ ಮನಸ್ಸಿನ ಮೂಲೆಗೆ ತಳ್ಳಿದ್ದ ತನ್ನ ದುರಂತ ದಾಂಪತ್ಯದ ಕರಿನೆರಳು ಮುಖದ ತುಂಬಾ ಆವರಿಸಿಕೊಂಡಾಗ ಬಲವಂತವಾಗಿ ಅದನ್ನು ಮರೆಮಾಡಿ ಇನ್ನೂ ಹೇಮಂತನ ತೋಳ್ತೆಕ್ಕೆಯಲ್ಲಿ ತನ್ಮಯಳಾಗಿ ಕಣ್ಮುಚ್ಚಿಕೊಂಡಿದ್ದ ಋತುವಿನ ತಲೆಗೊಂದು ಮೊಟಕಿದಳು.

ಪ್ರೇಮಿಗಳಿಬ್ಬರೂ ಬೇರ್ಪಟ್ಟರು. ಹೇಮಂತ ತುಂಟತನದಿಂದ ರಮ್ಯಳತ್ತ ನೋಡಿದರೆ, ಋತು ನಾಚಿಕೆಯಿಂದ ರಂಗೇರಿ ತಲೆತಗ್ಗಿಸಿದಳು.

'ಮಿಸ್ಟರ್ ಕುಮಾರ್, ನಮ್ಮ ಹುಡುಗಿಯನ್ನು ಕಿಡ್ನ್ಯಾಪ್ ಮಾಡಿದ್ದೂ ಅಲ್ದೆ ಅವಳ ಜೊತೆ ಚಕ್ಕಂದ ಆಡ್ತಿದ್ದೀರಲ್ಲಾ ನೀವು, ಇದೇನಿದು ವಿಪರೀತ....' ಬೇಕೆಂದೇ ರೇಗಿದಳು ರಮ್ಯ.

ಆಗಲೂ ಹೇಮಂತ ಉತ್ತರಿಸದೆ ನಸುನಗುತ್ತಿದ್ದರೆ ಋತು ಬಾಯ್ತೆರೆದಳು.

'ಅದು....ರಮ್ಯ, ಇವ್ನು ಬೇರೆ ಯಾರೂ ಅಲ್ಲ ಕಣೇ, ನಾನು ಹೇಳಿದ ಹಾಗೆ ಇವ್ನೇ ನನ್ನ ಹೇಮಂತ...' ಇಷ್ಟು ಹೇಳುವಾಗ ಋತುವಿಗೆ ಸಾಕು ಸಾಕಾಯಿತು.

ನಾಚಿಕೆಯಿಂದ ರಂಗೇರಿ ಅಪೂರ್ವ ಕಳೆಯಿಂದ ಹೊಳೆಯುತ್ತಿದ್ದ ಗೆಳತಿಯನ್ನೇ ಆಶ್ಚರ್ಯದಿಂದ ನೋಡಿದಳು. ಪುರುಷನ ಮೊದಲ ಸ್ಪರ್ಶ, ಸಾಮೀಪ್ಯ ಹೆಣ್ಣಿನಲ್ಲಿ ಇಷ್ಟು ಬದಲಾವಣೆಯನ್ನು ತರುತ್ತದೆಯೇ? ಶಿಶಿರದಲ್ಲಿ ಬೋಳಾಗುವ ಮರ ವಸಂತಕಾಲದಲ್ಲಿ ಮೈ ತುಂಬಾ ಹೂವರಳಿಸಿಕೊಂಡು ಚಿಗುರೆಲೆಯೊಂದಿಗೆ ನಸುನಗುವ ಹಾಗೆ....ಅದಕ್ಕೇ ಇರಬೇಕು, ಹೆಣ್ಣನ್ನು ಪ್ರಕೃತಿಗೆ ಹೋಲಿಸಿರುವುದು.

'ಗೊತ್ತಾಯ್ತು ಬಿಡು ಋತು, ಈಗಷ್ಟೇ ಹೇಮಂತನ ತಾಯಿ ಎಲ್ಲ ವಿಷಯವನ್ನೂ ಹೇಳಿದ್ರು, ಅಂತೂ ನಿನ್ನ ಹೇಮಂತ ನಿಂಗೆ ಸಿಕ್ಕಿಯಾಯ್ತು, ಈ ಬಡಪಾಯಿ ಗೆಳತೀನ ನೀನು ಮರೆಯದಿದ್ರೆ ಸಾಕು..' ಎಂದು ಕೀಟಲೆಯ ಧ್ವನಿಯಲ್ಲಿ ಹೇಳಿದವಳು ಹೇಮಂತನತ್ತ ತಿರುಗಿದಳು.

'ಕುಮಾರ್....ಅಲ್ಲಲ್ಲ ಹೇಮಂತ್, ಕಂಗ್ರಾಟ್ಸ್, ನೀವಿಬ್ರೂ ಒಂದಾಗಿದ್ದು ತುಂಬಾ ಖುಷಿಕೊಟ್ಟಿದೆ, ನಮ್ಮ ಋತುವಿನಂತೆ ನೀವೂ ಅವಳ ಧ್ಯಾನದಲ್ಲೇ ಇದ್ರಿ ಅಂದ್ರೆ ಆಶ್ಚರ್ಯ....ನಮ್ಮ ಹುಡುಗಿ ಬಹಳ ಸೂಕ್ಷ್ಮ ಸ್ವಭಾವದವ್ಳು. ಅವಳ ಕೇರ್ ಇನ್ಮೇಲೆ ನಿಮ್ದು..'

ಎಂದವಳು ಅವರೊಂದಿಗೆ ಕುಳಿತು ಮಾತಿಗೆ ತೊಡಗಿದಳು.

ಸ್ವಲ್ಪ ಹೊತ್ತಿಗೆ ಹೇಮಂತನ ತಾಯಿ ರುಕ್ಮಿಣಿಯವರೂ ಮೇಲೇರಿ ಬಂದರು. ಅವರ ಕೈಯ್ಯಲ್ಲಿ ಆಗಷ್ಟೇ ತಯಾರಿಸಿದ ಬಿಸಿ ಮೈಸೂರು ಪಾಕಿನ ತಟ್ಟೆಯಿತ್ತು. ತಾವೇ ಕೈಯ್ಯಾರೆ ಋತು–ಹೇಮಂತರಿಗೆ ಸಿಹಿ ತಿನ್ನಿಸಿದರು.

'ನಂಗಂತೂ ತುಂಬಾ ಖುಷಿಯಾಗ್ತಿದೆ ಋತು. ಹೇಮಂತ ಬೆಂಗಳೂರಿಗೆ ಬಂದ ಮೇಲಷ್ಟೇ ನಿನ್ನನ್ನು ಪ್ರೀತಿಸುತ್ತಿರುವ ವಿಷಯ ಹೇಳಿದ. ನೀನಲ್ದೇ ಇನ್ಯಾರನ್ನೂ ತಾನು ಮದ್ವೆಯಾಗುವುದಿಲ್ಲವೆಂದು ಹೇಳಿದಾಗ ನಂಗೆ ಆತಂಕವಾಗಿದ್ದಂತೂ ಹೌದು. ನೀನ್ಯಾರೋ, ನಿಂಗೆ ಮದ್ವೆಯೂ ಆಗಿರಬಹುದೋ ಏನೋ....ಎಂದೆಲ್ಲಾ ನಂಗೆ ಯೋಚನೆಯಾಗಿತ್ತು. ಆದ್ರೆ ನೀನೂ ಇಷ್ಟು ವರ್ಷ ಮದ್ವೆಯಾಗದೆ ಅವನಿಗಾಗಿ ಕಾದಿದ್ದನ್ನು ನೋಡಿ ನಂಗೆ ಮನಸ್ಸು ತುಂಬಿ ಬಂದಿದೆ....ಒಂದು ಒಳ್ಳೆಯ ದಿನ ನೋಡಿಕೊಂಡು ನಾವಿಬ್ರೂ ನಿಮ್ಮ ಕೋಟೆ ಬಂಗಲೆಗೆ ಹೆಣ್ಣು ಕೇಳಿಕೊಂಡು ಬರ್ತೀವಿ..' ಎಂದರು.

'ಅಮ್ಮಾ....ನನ್ನ ಋತು ನಂಗೆ ಸಿಕ್ಕಿಯಾಯ್ತು, ಮದುವೆಗೆ ಅವಸರ ಏನಿಲ್ಲ, ಎಷ್ಟಾದರೂ ಚಿಕ್ಕಂದಿನಲ್ಲೇ ಮದ್ವೆಯಾದವರಲ್ವಾ ನಾವು...' ತುಂಟ ಧ್ವನಿಯಲ್ಲಿ ಮಾತನಾಡಿದ.

'ಪುಣ್ಯಾತ್ಮ, ಅದು ಎಷ್ಟಾದ್ರೂ ನಾಟಕದ ಮದ್ವೆ, ಅದನ್ನೇ ನಂಬಿ ಅವಳ ಜೊತೆ ಸಂಸಾರ ಮಾಡೋಕಾಗುತ್ತಾ? ನೂರಾರು ಜನರ ಮುಂದೆ ನೀವು ಗಂಡ ಹೆಂಡ್ತಿ ಅಂತ ಅನ್ನಿಸಿಕೊಳ್ಬೇಕು....' ಆತಂಕದಿಂದಲೇ ಮಾತನಾಡಿದ ತಾಯಿಯನ್ನು ನೋಡಿ ಹೇಮಂತ ಗೊಳ್ಳನೆ ನಕ್ಕ.

'ಅಮ್ಮಾ, ನಾನು ತಮಾಷೆಗೆ ಹಾಗಂದೆ, ನೀನು ನಿಜ ಅಂತ ನಂಬಿ ಬಿಟ್ಯಲ್ಲಾ, ಈಗ ಋತುವಿನ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬನ ಕೊಲೆಯಾಗಿದೆ. ಕೊಲೆಗಾರನ ಪತ್ತೆಗಾಗಿ ನಾನು ಶಕ್ತಿ ಮೀರಿ ಪ್ರಯತ್ನಿಸ್ತಿದೀನಿ. ಇದೆಲ್ಲಾ ಗೊಂದಲ ಕಳೆದ್ಮೇಲೆ ನೀನೇ ಹೇಳಿದಂತೆ ಋತುವಿನ ತಂದೆಯನ್ನು ಭೇಟಿಯಾಗೋಣ'.

ಹೇಮಂತನ ಮಾತುಗಳು ಎಲ್ಲರಿಗೂ ಒಪ್ಪಿಗೆಯಾದವು.

'ಆದ್ರೆ ಋತು, ನಿಮ್ಮ ತಂದೆ ಹೇಮಂತನನ್ನು ಒಪ್ಪಿಕೊಳ್ಳುತ್ತಾರಷ್ಟೇ, ಅವರೇನಾದ್ರೂ ವಿರೋಧ ವ್ಯಕ್ತಪಡಿಸಿದ್ರೆ..' ರುಕ್ಮಿಣಿಯವರ ಆತಂಕವಿನ್ನೂ ಪೂರ್ತಿ ದೂರವಾದಂತಿರಲಿಲ್ಲ.

'ಇಲ್ಲಮ್ಮಾ, ಪಪ್ಪನ ಬಗ್ಗೆ ನಂಗೆ ಚೆನ್ನಾಗಿ ಗೊತ್ತು ಅವರು ಯಾವತ್ತೂ ನನ್ನ ಇಷ್ಟಕ್ಕೆ ವಿರೋಧವಾಗಿ ನಡೆದುಕೊಂಡವ್ರಲ್ಲ. ಇಷ್ಟು ದಿನ ಮದುವೆಯನ್ನು ಮುಂದು ಹಾಕುತ್ತಾ ಬಂದಿದ್ದಕ್ಕೆ ಆಗಾಗ ಆತಂಕ ಪಡುತ್ತಾರಷ್ಟೇ. ನನ್ನ, ಹೇಮಂತನ ಪ್ರೀತಿಯ ವಿಷಯವನ್ನು ನಾನ್ಯಾವತ್ತೂ ಹೇಳಿಲ್ಲ, ಇವತ್ತು ಅವ್ರ ಜೊತೆ ಖಂಡಿತಾ ಮಾತಾಡ್ತೀನಿ, ನೀವು ಯೋಚಿಸ್ಬೇಡಿ....' ಋತು ಧೈರ್ಯ ತುಂಬಿದಳು.

ಮತ್ತೆ ಒಂದು ಗಂಟೆ ಗೆಳತಿಯೊಂದಿಗೆ ಮನೆ ಪೂರ್ತಿ ಓಡಾಡಿದಳು ಋತು. ಆ ಮನೆಯ ಸರಳತೆ, ಅಲ್ಲಿನ ಅಚ್ಚುಕಟ್ಟು....ಮನೆಯ ಸುತ್ತಲಿನ ಹಸಿರು ಅವಳಿಗೆ ಖುಷಿಕೊಟ್ಟಿತು.

'ನಂಗಿನ್ನು ಲೇಟಾಗ್ತಿದೆ, ಚಿಕ್ಕಮ್ಮ ಕಾಯ್ತಿರ್ತಾರೆ...' ಋತು ಹೊರಡುವ ಆಸಕ್ತಿ ತೋರಿದಾಗ ರುಕ್ಮಿಣಿಯವರು ಅವಳನ್ನು ದೇವರಮನೆಗೆ ಕರೆದೊಯ್ದು ಅಲ್ಲಿದ್ದ ಮಣೆಯ ಮೇಲೆ ಕುಳ್ಳಿರಿಸಿದರು.

'ಋತು....ನೀನು ನಮ್ಮ ಮನೆಯ ಮಹಾಲಕ್ಷ್ಮಿ....ದೇವರ ಮುಂದಿರುವ ಕುಂಕುಮವನ್ನು ಹಚ್ಚಿಕೊಂಡು ಹೋಗು, ನೀನು–ಹೇಮಂತ ಈ ಮನೆಯಲ್ಲಿ ನಗುನಗುತ್ತಾ ಬಾಳುವೆ ಮಾಡುವಂತಾಗಲಿ..' ಮನತುಂಬಿ ಹಾರೈಸಿದರು.

ಹೊರಡುವ ಮೊದಲು ತನ್ನ ಪ್ರೀತಿಯ ಹುಡುಗ ಹೇಮಂತನತ್ತ ನೋಡಿದಳು ಋತು. ಅವನು ಅವಳನ್ನೇ ದಿಟ್ಟಿಸುತ್ತಿದ್ದ. ಅವಳಿಗೆ ಶ್ರೀನಿವಾಸ ಕಲ್ಯಾಣದ ಆ ಘಳಿಗೆ ನೆನಪಾಯಿತು. ಆ ಒಂದು ನೋಟ, ಆ ಒಂದು ರೋಮಾಂಚನ ಅವರಿಬ್ಬರನ್ನೂ ಹೀಗೆ ಇಲ್ಲಿ ಒಂದುಗೂಡಿಸಿತ್ತು.

ಹೇಮಂತ ಅವಳ ಹಸ್ತವನ್ನು ಪ್ರೀತಿಯಿಂದ ಅದುಮಿದ. ಆ ಒಂದು ಸ್ಪರ್ಶ ಅವನ ಸಾವಿರ ಮಾತುಗಳನ್ನು ಒಟ್ಟಿಗೆ ಆಡಿತ್ತು.

ತನ್ನ ಮೊಬೈಲಿನಿಂದ ಅವನೊಂದು ಕಾಲ್ ಮಾಡಿದ. ತಕ್ಷಣವೇ ದೂರದಲ್ಲಿ ಕೆನೆ ಬಣ್ಣದ ಕಾರಿಗೊರಗಿ ಕಾಯುತ್ತಿದ್ದ ಆ ದಡೂತಿ ವ್ಯಕ್ತಿ ಕಾರನ್ನು ಡ್ರೈವ್